# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5045/2024 ಫ್ರಾಸಾ-02
ಚಾಸಾ-02

ದಿನಾಂಕಃ 17-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನವೀನ್ ಕುಮಾರ್ ಕೆ. |
| **ತಂದೆಯ / ಗಂಡನ ಹೆಸರು** | ನ್ಯಾತಪ್ಪ |
| **ವಯಸ್ಸು** | 30 |
| **ಉದ್ಯೋಗ** | ಎನ್.ಟಿ.ಆರ್. ಬಾರ್ ನಲ್ಲಿ ಕ್ಯಾಷಿಯರ್ |
| **ವಾಸಸ್ಥಳ** | ಕುರುಡಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ಕಳೆದ 2 ವರ್ಷಗಳಿಂದ ನಾನು ಎನ್.ಟಿ.ಆರ್. ಬಾರ್ ನಲ್ಲಿ ಕ್ಯಾಷಿಯರ್ ಕೆಲಸ ಮಾಡುತ್ತಿದ್ದೇನೆ.**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಆಗಾಗ ಎನ್.ಟಿ.ಆರ್. ಬಾರ್ ಗೆ ಬರುತ್ತಿದ್ದರು ಅದರಿಂದ ಅವರ ಪರಿಚಯ ಇರುತ್ತದೆ, ಚಾಸಾ-1 ರವರ ಪರಿಚಯ ಇರುವುದಿಲ್ಲ. ಒಂದುವರೆ ವರ್ಷದ ಹಿಂದೆ ಪೋಲೀಸರು ಎನ್.ಟಿ.ಆರ್. ಬಾರ್ ಬಳಿ ಬಂದು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನೀನು ಬಾರ್ ನಲ್ಲಿ ಕೆಲಸ ಮಾಡುತ್ತೀಯಾ ಎಂದು ಕೇಳಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಯಾವುದೇ ಘಟನೆಯನ್ನು ನೋಡಿರುವುದಾಗಿ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಆರೋಪಿತರು ಏನು ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ. 21.05.2024 ರಂದು ರಾತ್ರಿ 9-45 ಗಂಟೆ ಸಮಯಕ್ಕೆ ರೆಸ್ಟೊರೆಂಟ್ ನ ಪೂರ್ವ ಭಾಗಕ್ಕೆ ಇರುವ ರೋಲಿಂಗ್ ಶಟ್ಟರ್ ಬಾಗಿಲ ಮುಂಭಾಗದಲ್ಲಿ ಜೊರಾಗಿ ಗಲಾಟೆ ಕೇಳಿಸಿದ್ದರಿಂದ ನಾನು ಹೋಗಿ ನೋಡಲಾಗಿ ಅಲ್ಲಿ ಆರೋಪಿತರು ಚಾಸಾ-1 ರವರನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಹೇಳಿ ಆರೋಪಿ ಪುನಿತ್ ಖಾಲಿ ಬೀರು ಬಾಟಲನ್ನು ತೆಗೆದುಕೊಂಡು ಕೊಲೆ ಮಾಡುವ ಉದ್ದೇಶದಿಂದ ಚಾಸಾ-1 ರವರ ತಲೆಯ ಎಡ ಭಾಗಕ್ಕೆ ಮತ್ತು ಆರೋಪಿ ಗೌರಿಶಂಕರ್ ತಲೆಯ ಬಲಭಾಗಕ್ಕೆ ಹೊಡೆದು ರಕ್ತಗಾಯಗೊಳಿಸಿದರು ಎಂದರೆ ಸರಿಯಲ್ಲ. ಆರೋಪಿತರು ಬೀರ್ ಬಾಟಲುಗಳಿಂದ ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಮತ್ತು ಸದರಿ ಬೀರ್ ಬಾಟಲುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಓದಿ ಹೇಳಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- 1 ಮತ್ತು 2 ರಿಂದ 5 ನೇ ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**